**ಸಾಕ್ಷಿಯನ್ನು ದಿನಾಂಕಃ 11.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಎಸ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಿಪಿ 1 ರ ಕ್ರಯ ಕರಾರು ಪತ್ರವನ್ನು 1 ರಿಂದ 5 ನೇ ಪ್ರತಿವಾದಿಯರು ಹಾಗುರಾ 1 ನೇ ಪ್ರತಿವಾದಿಯ ಗಂಡ ಬಾಲರಾಜು ಸೇರಿ ವಾದಿಗೆ ಬರೆದುಕೊಟ್ಟಿದ್ದು, ನನಗೆ ಈಗ ನಿಪಿಃ1 ರ ದಾಖಲೆ ತೋರಿಸುತ್ತಿದ್ದು ಅದರಲ್ಲಿ ಪ್ರತಿವಾದಿಯರ ಮತ್ತು 1 ನೇ ಪ್ರತಿವಾದಿಯ ಗಂಡನಾದ ಬಾಲರಾಜು ರವರ ಸಹಿಗಳು ಇವೆ. ಪ್ರತಿವಾದಿಯರ ಸಹಿಗಳನ್ನು ಈಗಾಗಲೇ ನಿಪಿಃ1(ಎ) ರಿಂದ (ಇ) ಎಂದು ಗುರುತಿಸಲಾಗಿದೆ. 1 ನೇ ಪ್ರತಿವಾದಿಯ ಗಂಡ ಬಾಲರಾಜು ರವರ ಸಹಿಯನ್ನು ನಿಪಿಃ1(ಐ) ಎಂದು ಗುರುತಿಸಲಾಯಿತು. ನಿಪಿಃ 1 ಕ್ಕೆ ಸಾಕ್ಷಿದಾರರಾಗಿ ನಾನು ಮತ್ತು ನಾಗೇಶ್ ಎನ್ನುವವರು ಸಹಿ ಹಾಕಿದ್ದು ಈಗ ನಾನು ನಿಪಿಃ1 ರ ಮೇಲೆ ಇರುವ ನನ್ನ ಮತ್ತು ನಾಗೇಶ್ ರವರ ಸಹಿಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಸದರಿ ಸಹಿಗಳನ್ನು ಈಗಾಗಲೇ ನಿಪಿಃ1(ಜಿ) ಮತ್ತು 1(ಎಫ್) ಎಂದು ಗುರುತಿಸಲಾಗಿದೆ. ನಿಪಿಃ1 ರ ಪತ್ರ ಬರಹಗಾರರಾಗಿ ಕೆ ಜೆ ಶಿವಲಿಂಗಯ್ಯ ರವರು ಸಹಿ ಮಾಡಿದ್ದು ಸದರಿ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸದರಿ ಸಹಿಯನ್ನು ಈಗಾಗಲೇ ನಿಡಿಃ1 (ಹೆಚ್) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.